# 107

III

Total No. of Questions – 15

Total No. of Printed Pages - 4

Regd. No. | | | | | | | | | | |

## Part - II
## KANNADA, Paper – I
## (Second Language)

Time : 3 Hours] [Max. Marks : 100

I. ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೂ **ಒಂದಕ್ಕೆ** ಭಾವಾರ್ಥ ಬರೆಯಿರಿ. $1 \times 6 = 6$

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಳ್ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ

**ಅಥವಾ**

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ ?

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳಲ್ಲಿ ಉತ್ತರಿಸಿ. $1 \times 6 = 6$

(1) 'ದೇವನೊಲಿದನ ಕುಲವೇ ಸತ್ಕುಲಂ' ಪದ್ಯದಲ್ಲಿ ಚೆನ್ನಯ್ಯನ ಕಾಯಕ ಮತ್ತು ಗುಪ್ತ ಭಕ್ತಿಯನ್ನು ಕುರಿತು ಬರೆಯಿರಿ.

(2) 'ನಾ ಬರೀ ಭ್ರೂಣವಲ್ಲ' ಎಂದು ಹೊಟ್ಟೆಯೊಳಗಿನ ಮಗುವು ಕೊಡುವ ಕಾರಣಗಳನ್ನು ಕುರಿತು ಬರೆಯಿರಿ.

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳಲ್ಲಿ ಉತ್ತರಿಸಿ. $1 \times 6 = 6$

(1) ಪುರುಷ ಸಮಾಜದ ಬಗ್ಗೆ ಶಕುಂತಲೆಯ ನಿಲುವುಗಳನ್ನು ಕುರಿತು ಬರೆಯಿರಿ.

(2) ಕರಿಯನ ಜೀವನ ಹೇಗಿತ್ತು ? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳಲ್ಲಿ ಉತ್ತರಿಸಿ. $1 \times 6 = 6$

(1) 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ ? ವಿಮರ್ಶಿಸಿ.

(2) ಯುದ್ಧ ಮಾಡಲು ಸೈನಿಕರು ನೀಡುವ ಕಾರಣಗಳನ್ನು ಕುರಿತು ಬರೆಯಿರಿ.

V. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ.

(2) ಮುತ್ತಿನ ಬಲೆಯಾದಡೆ ಬಂಧನವಲ್ಲವೆ ?

(3) ಬುದ್ಧನೇ ಇಲ್ಲದ ಅರಮನೆಗೊಬ್ಬ ಗಾರ್ಡು !

(4) ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ.

VI. ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ **ಇಬ್ಬರ** ಪರಿಚಯ ಬರೆಯಿರಿ. $2 \times 3 = 6$

(1) ಚೆನ್ನಣ್ಣ ವಾಲೀಕಾರ (2) ಬೆಸಗರಹಳ್ಳಿ ರಾಮಣ್ಣ

(3) ಕುವೆಂಪು (4) ಹರಿಹರ

VII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಶಿವಲಿಂಗವನ್ನು ಚೆನ್ನಯ್ಯನು ಯಾವ ಹೂಗಳಿಂದ ಸಿಂಗರಿಸುತ್ತಿದ್ದನು ?

(2) ಕರ್ನಾಟಕವು ಯಾರ ಹೃದಯಗಳಲ್ಲಿ ಹೊತ್ತಿರುವ ದೀಪವಾಗಿದೆ ?

(3) ನಾಡಿನ ಬಿಡುಗಡೆಯಲ್ಲಿ ಯಾವುದಕ್ಕೆ ಅಡೆತಡೆಗಳು ಇಲ್ಲವಾಗಿವೆ ?

(4) ಅಮ್ಮಿ ಯಾವುದನ್ನು ಕಡಿದು ಹಾಕಲೆಂದು ಕತ್ತರಿ ಹಿಡಿದಿದ್ದಾಳೆ ?

VIII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ರಾಗಿ ಬೀಸುವ ಕಲ್ಲನ್ನು ಕುರಿತ ಜನಪದ ಹೆಣ್ಣುಮಗಳ ಪ್ರಾರ್ಥನೆ ಯಾವುದು ?

(2) ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ ?

(3) ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು ?

(4) ಶಕುಂತಲೆ ಕಂಚಿನ ಧ್ವನಿಯಿಂದ ದುಷ್ಯಂತನಿಗೆ ಹೇಳಿದ್ದೇನು ?

IX. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ ?

(2) ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ ?

(3) ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ ?

(4) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ ?

X. ಈ ಕೆಳಗಿನ ಎರಡರಲ್ಲಿ **ಒಂದನ್ನು** ಕುರಿತು ಪತ್ರ ಬರೆಯಿರಿ. $1 \times 6 = 6$

(1) ಬೀದಿ ದೀಪ ದುರಸ್ತಿಗೊಳಿಸುವಂತೆ ಮಂಡಲ ಸರಪಂಚರಿಗೊಂದು ಪತ್ರ ಬರೆಯಿರಿ.

(2) ಕಾಲೇಜಿನಲ್ಲಿ ಗ್ರಂಥಾಲಯ ತೆರೆಯಲು ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.

XI. (A) ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ **ನಾಲ್ಕಕ್ಕೆ** ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ. $4 \times 2 = 8$

(1) ವಾಙ್ಮಯ (2) ಭಗವದ್ಗೀತೆ (3) ಅತ್ಯಾನಂದ (4) ವಂಶೋದ್ಧಾರ

(5) ಭಗ್ನಾವಶೇಷ (6) ಜೊತೆಗೂಡಿ (7) ಲಿಪಿಯಲ್ಲಿ (8) ಬಡಿದೆಬ್ಬಿಸು

(B) ಈ ಕೆಳಗಿನ ಆರು ಪದಗಳಲ್ಲಿ **ಮೂರಕ್ಕೆ** ಸಮಾಸ ಬಿಡಿಸಿ, ಸಮಾಸವನ್ನು ಹೆಸರಿಸಿ. $3 \times 2 = 6$

(1) ಗಿರಿವನದುರ್ಗಗಳು (2) ತುದಿಮೂಗು (3) ಇತ್ತಂಡ

(4) ಈ ನಾಯಿ (5) ಪೀತಾಂಬರ (6) ಅರಮನೆ

(C) ಈ ಕೆಳಗಿನ ಎಂಟು ಪದಗಳಲ್ಲಿ **ಐದಕ್ಕೆ** ಅರ್ಥ ಬರೆಯಿರಿ. $5 \times 1 = 5$

(1) ಕಾರ್ನಿಯ (2) ನಶೆ (3) ಉನ್ನತ್ತ (4) ಕದಳಿ

(5) ಸಂಕೋಲೆ (6) ಅಜಾತ (7) ಮೊಟ್ಟೆ (8) ನರ

XII. ಈ ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ. $1 \times 6 = 6$

(1) ಶಿಕ್ಷಣದ ಮಹತ್ವ

(2) ಗಣಕಯಂತ್ರ

(3) ಶಾಲೆ ಕಾಲೇಜುಗಳಲ್ಲಿ ವಾಚನಾಲಯಗಳ ಮಹತ್ವ.

XIII. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $1 \times 5 = 5$

(1) ಕಾಡಿನಲ್ಲಿ ತನಗೆ ಯಾರ ನೆರವುಂಟೆಂದು ಸೀತೆ ಹೇಳುತ್ತಾಳೆ ?

(2) ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ ?

(3) ಇಂದು ಬಂದು ನಾಳೆ ಹೋಗುವುದು ಯಾವುದು ?

(4) ಕ್ಷಾತ್ರವಧೆ ಮಾಡಿದವನು ಯಾರು ?

(5) ಒಡಲೊಳಗಿನ ಮಗು ತನ್ನ ರಕ್ತವನ್ನು ಏನೆಂದು ಭಾವಿಸುತ್ತದೆ ?

XIV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $1 \times 5 = 5$

(1) ಗಾಡಿ ಶಹಾಬಾದಿಗೆ ಬಂದಾಗ ಸಮಯ ಎಷ್ಟಾಗಿತ್ತು ?

(2) ಅಶೋಕನ ಸ್ತಂಭ ಎಲ್ಲಿದೆ ?

(3) ಶಕುಂತಲೆಯ ತಾಯಿಯ ಹೆಸರೇನು ?

(4) ಜ್ಯೋತಿಷಿಗಳ ಭವಿಷ್ಯವಾಣಿ ಓದಲು ಹೇಗಿರುತ್ತದೆ ?

(5) ಕಣ್ಣುಗಳಲ್ಲಿ ಯಾವುದರ ಸಾಲು ಚಿತ್ರಗಳು ಮೂಡಿಕೊಂಡವು ?

XV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $1 \times 5 = 5$

(1) ದಾರಿ ತಪ್ಪಿದವರಿಗೆ ಯಾರು ಬುದ್ಧಿ ಹೇಳುತ್ತಾರೆ ?

(2) ಬದುಕಿನ ಬಗ್ಗೆ ತಕರಾರಿಲ್ಲದವನು ಯಾರು ?

(3) ಅಣ್ಣಂದಿರಿಗೆ ಯಾವ ರೋಗ ಹಿಡಿದಿದೆ ಎಂದು ಬೋಳೇಶಂಕರ ಹೇಳುತ್ತಾನೆ ?

(4) ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು ?

(5) ಕತ್ತಲೆಯ ನಿಜ ಜನಕನು ಯಾರು ?